ದೇವತೆಗಳಿಗಿಂತಲೂ ಬಲಿಷ್ಠವಾಗುತ್ತಿದೆ. ಅವರ ಆಧುನಿಕ ಶಸ್ತ್ರಾಸ್ತ್ರಗಳ ಎದುರು ಹೋರಾಡುವ ಶಕ್ತಿ ನಮಗಿಲ್ಲ. ಒಂದೇ ಹೊಡೆತದಲ್ಲಿ ನಮ್ಮನ್ನು ಸಂಹರಿಸುತ್ತಾರೆ, ಅವರಲ್ಲಿ ಅಂತಹ ಕ್ಷಿಪಣಿಗಳಿವೆ. ಮನುಷ್ಯರಿಗಿಂತ ನೀವು ದೇವರುಗಳೇ ವಾಸಿ. ಹಲವು ವರ್ಷಗಳ ಕಾಲ ಬದುಕಿಸಿ ಆನಂತರ ಕೊಲ್ಲುತ್ತಿದ್ದರಿರಿ. ಈಗೇನಾದರೂ ನಾವು ಹೋದರೆ ಒಂದೇ ಕ್ಷಣದಲ್ಲಿ ಸಂಹರಿಸುತ್ತಾರೆ. ಹಾಗಾಗಿ ಏನಾದರೂ ಮಾರ್ಗ ತೋರಿಸಿ ಅಂದರು.'

'ಮುಂದೇನಾಯಿತು?'

'ಮನುಷ್ಯರು ತಿನ್ನುವ, ನೋಡುವ, ಉಪಯೋಗಿಸುವ ವಸ್ತುಗಳಲ್ಲಿ ನಾವು ಹೊಕ್ಕು ಅವರಿಗೆ ತೊಂದರೆ ಕೊಡುತ್ತೇವೆ, ದಾಸರನ್ನಾಗಿ ಮಾಡುತ್ತೇವೆ. ಮನುಕುಲದ ವಿನಾಶ ಮಾಡುತ್ತೇವೆ. ಉತ್ಪಾದಕರ ಮನಹೊಕ್ಕು ಇಂತಹ ಸೃಷ್ಟಿಗಳನ್ನು ಮಾಡಲಿಕ್ಕೆ ಪ್ರಚೋದಿಸುತ್ತೇವೆ. ಮನುಷ್ಯರನ್ನು ದೃಷ್ಟಿ ಹಾಗೂ ನಾಲಿಗೆಯಿಂದಷ್ಟೇ ಸೋಲಿಸಲು ಸಾಧ್ಯ. ಮೆದುಳಿನಿಂದ ಅಲ್ಲ ಎಂದರು. ನಾನು ಅಸ್ತು ಎಂದೆ.'

'ಅಯ್ಯೋ ಭಗವಂತ, ಎಂತಹ ಕೆಲಸ ಮಾಡಿದಿರಿ. ಇದು ನಿಜವೆ! ನಂಬಬಹುದೆ?'

ನಾರಾಯಣ ಗೋಡೆಯ ಮೇಲೆ ಸ್ಕ್ರೀನ್ ಮೂಡಿಸಿ, ವರ್ಣತಂತುವಿನ ಸ್ವರೂಪವನ್ನು ಪರದೆ ಮೇಲೆ ಮೂಡಿಸಿದ. ಅದರ ಒಳಹೊಕ್ಕು ಆ ತಂತುವಿನ ವಿಶ್ವರೂಪ ತೋರಿಸಿದ.

'ಅಮ್ಮಾ...! ವಾಟ್ ಎ ವಂಡರ್. ದೇವರೇ ನಿನಗೂ ವಿಜ್ಞಾನ ಗೊತ್ತಾ?'

'ಇದೆಲ್ಲ ನಾನೇ ನಡೆಸುತ್ತಿರುವ ನಾಟಕ ವತ್ಸ. ನೀವೆಲ್ಲ ಪಾತ್ರಧಾರಿಗಳು. ಜಗತ್ತು ಎಷ್ಟೇ ಮುಂದುವರೆದರೂ ಜನನ–ಮರಣ ನನ್ನ ಕೈಯಲ್ಲಿದೆ. ನಿಗೂಢ ಸೌರಮಂಡಲದ ಚಲನೆ ನನ್ನ ಕೈಯಲ್ಲಿದೆ' ಎಂದ ದೇವರು.

'ಸತ್ಯ ಸತ್ಯ... ಹಾಗಾದರೆ ಆ ರಾಕ್ಷಸರನ್ನು ಕೊಲ್ಲೋದು ಹೇಗೆ?' ಎಂದು ವಿಷಯಕ್ಕೆ ಬಂದ ಪದ್ದು.

'ಪ್ರತಿಯೊಬ್ಬರ ಮನೆಮನಗಳಲ್ಲೂ ರಕ್ಕಸರು ನೆಲೆಸಿದ್ದಾರೆ. ಅವರಿಂದ ಮನುಷ್ಯ ಜನಾಂಗವೇ ನಾಶವಾಗಬೇಕಾಗುತ್ತದೆ.'

'ನಾರಾಯಣ, ಇದು ಅನ್ಯಾಯ. ಇಂತಹ ವರವನ್ನೇಕೆ ಇತ್ತೆ?'

'ಬೇಡಿದವರಿಗೆ ಇಲ್ಲ ಎನ್ನದವನು ನಾನು.'

'ನಾನು ಬೇಡಿಕೊಳ್ಳುವೆ, ಇದಕ್ಕೆ ಪರಿಹಾರವೇನು?'

'ದೈವತ್ವದ ಬಗ್ಗೆ ನಂಬಿಕೆ ಇದೆಯೇ ನಿನಗೆ?'

'ಸಂಕಟ ಬಂದಾಗ ವೆಂಕಟರಮಣ. ಸಮಸ್ಯೆ ಬಂದಿದೆ, ನಂಬುವೆ, ಹೇಳು?'

'ನಿನ್ನ ಸಂಶೋಧನಾ ಸಮಯದಲ್ಲಿ ಏನೆಲ್ಲವನ್ನು ಮಾಡಿ ಏನೂ ಹೊಳೆಯದಿದ್ದಾಗ, ಓ ಗಾಡ್... ಎನ್ನುತ್ತಿದ್ದೆಯಲ್ಲ... ನೀನು ವೈಚಾರಿಕನಾದರೂ ನನ್ನಲ್ಲಿ ಸ್ವಲ್ಪ ನಂಬಿಕೆ ಇಟ್ಟಿರುವುದಕ್ಕಾಗಿಯೇ ನಾನು ನಿನ್ನಲ್ಲಿಗೆ ಬರಬೇಕಾಯಿತು.'

'ಥ್ಯಾಂಕ್ಸ್, ಗಾಡ್. ಈಗ ಹೇಳಿ ಪರಿಹಾರ.'

'ತಿನ್ನುವ ಆಹಾರ, ನೋಡುವ ನೋಟ, ಉಪಯೋಗಿಸುವ ಇಂಟರ್ನೆಟ್‌ನಿಂದ ಅಸುರರು ನಿಮ್ಮೊಳಗೆ ಪ್ರವೇಶ ಮಾಡಿದ್ದಾರೆ. ಅವರಿಂದಾಗಿ ಮನುಷ್ಯರ ಆಯುಷ್ಯ ಕ್ಷೀಣಿಸುತ್ತಿದೆ. ಮನಸ್ಸು ವಿಚಿತ್ರ ತೊಳಲಾಟದಲ್ಲಿ ನಲಗುತ್ತಿದೆ. ಏನು ಮಾಡುವುದು, ವರ ಕೊಟ್ಟಾಗಿದೆ, ಅನುಭವಿಸಬೇಕು.'

'ಹಾಗೆಂದರೆ ಹೇಗೆ ನಾರಾಯಣ... ಏನಾದರೂ ಪರಿಹಾರ ಇರಲೇಬೇಕಲ್ಲವೇ?'

'ಅವರನ್ನು ಕೊಲ್ಲುವುದು ಅಷ್ಟು ಸುಲಭವಲ್ಲ. ಎಲ್ಲೆಲ್ಲೂ ಅವರು ಆವರಿಸಿಕೊಂಡಿದ್ದಾರೆ. ಇಷ್ಟು ಯುಗಗಳಲ್ಲಿ ನೇರವಾಗಿ ದಾಳಿ ಮಾಡುತ್ತಿದ್ದ ಅವರು ಈಗ ಇಂತಹ ಪ್ಲಾನ ಮಾಡಿ ವರ ಪಡೆದದ್ದು ನನ್ನನ್ನೇ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡಿದೆ. ಅವರಿಗೆ ಗೊತ್ತು, ಕಲಿಯುಗದಲ್ಲಿ ಜನ ದೇವರನ್ನು ನಂಬಲ್ಲ. ತಪಸ್ಸು ಮಾಡಲ್ಲ. ಯಾರೂ ಇದರ ಪರಿಹಾರದ ಬಗ್ಗೆ ಯೋಚಿಸೊಲ್ಲ. ಹಾಗಾಗಿ ಪರಿಹಾರವಿಲ್ಲ...'

'ಭಗವಂತನಾದ ನೀನೇ ಕೈ ಬಿಟ್ಟರೆ ಹೇಗೆ?

'ಕಾಲ ಮೀರಿದೆ. ದೇವರನ್ನು ತೃಣವೆಂದು ಭಾವಿಸಿದ ನೀವುಗಳೆಲ್ಲ ಅನುಭವಿಸಲೇಬೇಕು.'

'ನೀನು ನಮ್ಮನ್ನು ತಪ್ಪು ತಿಳಿದಿರುವೆ. ನಿತ್ಯ ಸಾವಿರಾರು ಮಂದಿರುಗಳು ಏಳುತ್ತಿರುವುದು ನಿನಗೆ ಕಾಣುತ್ತಿಲ್ಲವೆ?'

'ನನ್ನನ್ನು ಮಾರುಕಟ್ಟೆ ವಸ್ತುವಾಗಿ ಮಾಡಿಕೊಂಡಾಗ ಭಕ್ತಿ ಎಲ್ಲಿಯದು? ಭಕ್ತರಿಂದ ಸ್ವಾಮಿಗಳವರೆಗೆ ಎಲ್ಲರೂ ವ್ಯಾವಹಾರಿಕರೆ. ಹೀಗಾಗಿ, ನಾನೇನೂ ಮಾಡಲು ಸಾಧ್ಯವಿಲ್ಲ.'

'ಸರಿ ಭಗವಂತ. ಈಗ ನಾನೇನು ಮಾಡುವುದು ಹೇಳು. ಜನರಲ್ಲಿ ಜಾಗೃತಿಯನ್ನಾದರು ಮೂಡಿಸುವೆ.'

'ಮನೋನಿಗ್ರಹ, ಉತ್ತಮ ಹವ್ಯಾಸ, ದೈಹಿಕ ವ್ಯಾಯಾಮ ಒಂದೇ ಅಸುರರ ತೊಂದರೆಯಿಂದ ಪಾರಾಗಲು ಇರುವ ಪರಿಹಾರ. ಯಾರು ಮನಸ್ಸನ್ನು ನಿಗ್ರಹಿಸಿ ಟಿ.ವಿ, ಮೊಬೈಲ್, ಇಂಟರ್ನೆಟ್‌ನಿಂದ ದೂರವಿರುವರೋ, ಯಾರು ಹೊಸ ಆಹಾರ ಪದ್ಧತಿ, ಜಂಕ್ ಫುಡ್‌ನಿಂದ ದೂರ ಉಳಿಯುವರೋ ಅವರು ಆ ರಾಕ್ಷಸರಿಂದ ದುರವುಳಿಯುತ್ತಾರೆ ಹಾಗೂ ಬಹುಕಾಲ ಬಾಳುತ್ತಾರೆ' ಎಂದು ಹೇಳಿದ ನಾರಾಯಣ ಅದೃಶ್ಯನಾದ.

'ನಾರಾಯಣ... ನಾರಾಯಣ' ಎಂದು ಪದ್ದು ಬಡಬಡಾಯಿಸತೊಡಗಿದ.

'ನಾನು ನಾರಾಯಣ ಅಲ್ಲ ಡ್ಯಾಡಿ, ಪ್ರೇರಣಾ' ಎಂದು ಮಗಳು ಬಳಿಗೆ ಬಂದಳು. 'ಈ ಕುರುಕುರೆ ಎಷ್ಟು ಟೇಸ್ಟಿದೆ ನೋಡು?' ಎಂದು ಮುರುಕಲೊಂದನ್ನು ಅಪ್ಪನ ಬಾಯಿಯ ಬಳಿ ಹಿಡಿದು, 'ಸಾಯಂಕಾಲ ನಂಗೆ ಪಿಜ್ಜಾ ಬೇಕು' ಎಂದು ಬೇಡಿಕೆ ಮಂಡಿಸಿದಳು. ಮಗ ಮೊಬೈಲ್‌ನಲ್ಲಿ ಮುಳುಗಿದ್ದ. ಅಮ್ಮ ಟಿ.ವಿ. ನೋಡುವುದರಲ್ಲಿ ತಲ್ಲೀನಳಾಗಿದ್ದಳು. 'ನೆಟ್ ಪ್ಯಾಕ್ ಖಾಲಿಯಾಗಿದೆ. ರೀಚಾರ್ಜ್ ಮಾಡಿಸಿ' ಎಂದು ಹೆಂಡತಿ ಒಳಗಿನಿಂದಲೇ ಆದೇಶಿಸಿದಳು.

ನಾರಾಯಣನ ಮಾತು ನೆನಪಿಸಿಕೊಂಡು ಪದ್ದು ನಿಂತಲ್ಲಿಯೇ ಕುಸಿದ.

